ಇತ್ತೀಚೆಗೆ ನಾನು ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಿಗೆ ಬೇಟಿ ಕೊಟ್ಟಾಗ ಅಲ್ಲಿನ ರೈತ ಪ್ರತಿನಿಧಿಗಳೊಡನೆ ಚರ್ಚೆ ಮಾಡಿ ಕಂದಾಯ ಅಧಿಕಾರಿಗಳು, ನೀರಾವರಿ ಇಲಾಖೆ ಅಧಿಕಾರಿಗಳು ರೈತ ಪ್ರತಿನಿಧಿಗಳೊಂದಿಗೆ ಜಮೀನಿನ ಸರ್ವೆ ಮಾಡಿ ನೀರು ಕೊಟ್ಟಂತಹ ಜಮೀನಿನ ಮಾಲೀಕರಿಂದ ಮಾತ್ರ ನೀರು ಕರ ವಸೂಲಿ ಮಾಡುವಂತೆ ಆದೇಶ ನೀಡಿದೆ.

ಈ ಸರ್ವೆ ಬಹು ಭಾಗಗಳಲ್ಲಿ ಆಗಿ ರೈತರು ಈಗಾಗಲೇ ಆವರು ಕೊಡಬೇಕಾದ ನೀರಿನ ದರದ ಬಾಕಿಯಲ್ಲಿ ಭಾಗಶಃ ಹಣವನ್ನು ಪಾವತಿ ಮಾಡಿರುತ್ತಾರೆ ರೈತರಿಂದ ದಂಡ ನೀರು ತೆರಿಗೆ ಸಂಪೂರ್ಣವಾಗಿ ವಸೂಲಿ ಮಾಡಬೇಕೆಂಬ ಬೇಡಿಕೆ ಇದ್ದು. ಈ ಬೇಡಿಕೆ ಸರ್ಕಾರದ ಪರಿಶೀಲನೆಯಲ್ಲಿದೆ,

ಶ್ರೀ ಎಸ್.ಪೆಚ್. ಕೌಜಲಗಿ.—ಮಾನ್ಯ ಅಧ್ಯಕ್ಷರೇ, ಈ ನೀರಿನ ದಂಡದ ಬಡ್ಡಿಯನ್ನು ಮಾನ್ಯ ಮುಖ್ಯಮಂತ್ರಿಗಳು ಬೆಳಗಾಂ ಜಿಲ್ಲೆಗೆ ಬಂದಾಗ ಸೂಟ್ ಬಿಡುತ್ತೇವೆಂದು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಈ ಬಗ್ಗೆ ಆರ್ಡರ್ ಆಗಿಲ್ಲ. ಅಲ್ಲಿ ಯಾರೂ ನೀರಿನ ಕರವನ್ನೇ ಕೊಡುವುದಕ್ಕೆ ತಯಾರಿಲ್ಲ. ನೀರಿನ ಬಡ್ಡಿಗೆ ಸಾವಿರ ಇದ್ದರೆ, ದಂಡದ ಬಡ್ಡಿಗೆ ಸಾವಿರ ಇರುತ್ತದೆ. ಒಂದು ಎಕರೆಗೆ ಸುಮಾರು ೨೭ ಸಾವಿರ ನೀರು ದರ ಮತ್ತು ದಂಡದ ಬಡ್ಡಿ ಕೊಡಬೇಕೆಂದು ಅಲ್ಲಿನ ತಹಶೀಲ್ದಾರರು ತಿಳಿಸುತ್ತಾರೆ. ಇದನ್ನು ಕೊಡದೇ ಹೋದರೆ, ಜಪ್ತಿ ಮಾಡುವುದಕ್ಕೆ ಬರುತ್ತಾರೆ. ಈ ದಂಡದ ಬಡ್ಡಿಯನ್ನು ಸೂಟ್ ಬಿಡುತ್ತೇವೆಂದು ಹೇಳಿದರು. ಆದುದರಿಂದ, ಈಗಾಗಲೇ ರೈತರಿಗೆ ಕೊಟ್ಟಿರುವ ವಚನದ ಪ್ರಕಾರ, ಕೂಡಲೇ ಆರ್ಡರ್ ಮಾಡಬೇಕೆಂದು ಕಳಕಳಿಯಿಂದ ನಾನು ಕೇಳಿಕೊಳ್ಳುತ್ತೇನೆ, ಈ ದಂಡದ ಬಡ್ಡಿ ಬಗ್ಗೆ ತಾವು ಹೇಳಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ದಂಡದ ಬಡ್ಡಿ ವಸೂಲ್ಮಾಡಬಾರದು. ಎಂದು ಈಗಾಗಲೇ ಆದೇಶ ಕೊಟ್ಟಿದ್ದೇನೆ. ನೀರಿನ ದರವನ್ನು ಕೊಡಲಿ. ಈ ದಂಡದ ಬಡ್ಡಿ ಸಂಪೂರ್ಣವಾಗಿ ಬಿಡಬೇಕೆಂದು ಬೇಡಿಕೆ ಇದೆ, ಇದು ಹತ್ತಾರು ವರ್ಷಗಳಿಂದ ಬಂದಿರತಕ್ಕಂಥದ್ದಾಗಿದೆ ಸರ್ಕಾರ ಸಹಾನುಭೂತಿಯಿಂದ ಇದನ್ನು ಪರಿಶೀಲನೆ ಮಾಡುತ್ತಿದೆ. ದಂಡದ ಬಡ್ಡಿ ವಸೂಲಿಯನ್ನು ಈಗ ನಿಲ್ಲಿಸಿದ್ದೇವೆ. ಮೂಲ ನೀರಿನ ಕರ ಮಾತ್ರ ಕೊಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿನ್ನೆ ಮಾನ್ಯ ಮುಖ್ಯ ಮಂತ್ರಿಗಳು ನೀರಿನ ಕರ ಕಟ್ಟಿದರೆ ದಂಡದ ಬಡ್ಡಿ ವಸೂಲು ಮಾಡುವುದಿಲ್ಲ ಎಂದು ಹೇಳಿದ್ದಾರೆ,

೪ ರಾಜ್ಯದಲ್ಲಿ ಅಂಗೀಕೃತ ವೈದ್ಯಕೀಯ ಕಾಲೇಜುಗಳಲ್ಲಿ ಮೈಗ್ರೇಷನ್ ಆದಾಗ ಎಂ.ಸಿ.ಐ, ನಿಯಮಗಳನ್ನು ಪಾಲಿಸದಿರುವ ಬಗ್ಗೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಅಂಗೀಕೃತ ವೈದ್ಯಕೀಯ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಮೈಗ್ರೇಷನ್ ಆದಾಗ ಎಂ.ಸಿ.ಐ. ನಿಯಮಗಳನ್ನು ಪಾಲಿಸದಿರುವುದರ ಬಗ್ಗೆ ಮಾನ್ಯ ಆರೋಗ್ಯ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಲ್ಲಿಕಾರ್ಜುನ ಖರ್ಗೆ. ಡಿ.ಜಿ. ಬಸವನಗೌಡ ಮಂತಾದವರು ಕಳುಹಿಸಿರುವ ಗಮನ ಸೆಳೆಯುವ ಸೂಚನೆಗೆ ಈ ಕೆಳಕಂಡ ಲಿಖಿತ ಹೇಳಿಕೆಯನ್ನು ತಮ್ಮ ಅನುಮತಿಯನ್ನು ಪಡೆದು ನೀಡಲು ಬಯಸುತ್ತೇನೆ.

ಒಂದು ವೈದ್ಯಕೀಯ/ದಂತ ವಿದ್ಯಾಲಯದಿಂದ ಬೇರೆ ವೈದ್ಯಕೀಯ/ದಂತ ವಿದ್ಯಾಲಯಗಳಿಗೆ ವಿದ್ಯಾರ್ಥಿಗಳ ವರ್ಗಾವಣೆ ಬಗ್ಗೆ ಈ ಕೆಳಕಂಡಂತೆ ಮಾರ್ಗಸೂಚಿಗಳನ್ನು ಸರ್ಕಾರವು ಹೊರಡಿಸಿದೆ.

೧ ವಿದ್ಯಾರ್ಥಿಗಳ ಸ್ಥಾನಾಂತರ ವರ್ಗಾವಣೆಗೆ ಸಂಬಂಧಿಸಿದಂತೆ ಇರುವ ಎಲ್ಲಾ ವಿಷಯಗಳನ್ನು ಮುಂದೆ ಸಂಬಂಧಪಟ್ಟ ವಿಶ್ವವಿದ್ಯಾಲಯಗಳು ವ್ಯವಹರಿಸಬೇಕು.

೨ ಭಾರತೀಯ ವೈದ್ಯ ಪರಿಷತ್ತಿನ ಸೂತ್ರ ಪ್ರಕಾರ ಮತ್ತು ಕೆಳಕಂಡ ಪರಿಷತ್ತಿನಡಿಯಲ್ಲಿ ವೈದ್ಯಕೀಯ ಶಿಕ್ಷಣ ನಿರ್ದೇಶಕರು, ವರ್ಗಾವಣೆ ಅನುಮೋದಿಸಲು ಅಥವಾ ತಿರಸ್ಕರಿಸಲು ಅಧಿಕಾರ ಉಳ್ಳವರಾಗಿರುತ್ತಾರೆ.

೧. ವೈದ್ಯಕೀಯ ಶಿಕ್ಷಣ ನಿರ್ದೇಶಕರೇ, ವರ್ಗಾವಣೆ ಪ್ರಕರಣಗಳನ್ನು ಸರ್ಕಾರಕ್ಕೆ ಉಲ್ಲೇಖಿಸದೇ ಕಟ್ಟುನಿಟ್ಟಾಗಿ ನಿಯಮಾವಳಿಯಂತೆ ತೀರ್ಮಾನಿಸತಕ್ಕದ್ದು.

೨. ಭಾರತೀಯ ವೈದ್ಯ ಪರಿಷತ್ತಿನ ಸೂತ್ರದಂತೆ ಮೊದಲನೇ ಎಂ.ಬಿ.ಬಿ.ಎಸ್ ಪರೀಕ್ಷೆ ಪಾಸು ಮಾಡಿದ ದಿನಾಂಕದಿಂದ ಮೂರು ತಿಂಗಳ ಅವಧಿ ಪೂರೈಸಿದ ನಂತರ ವರ್ಗಾವಣೆ ಮಾಡಕೂಡದು

೩ ಭಾರತೀಯ ವೈದ್ಯ ಪರಿಷತ್ತಿನ ಸೂತ್ರದಂತೆ ವರ್ಗಾವಣೆಯನ್ನು ಮೊದಲನೆ ವರ್ಷಕ್ಕೆ ನಿಗಧಿಪಡಿಸಿದ ಪ್ರವೇಶ ಸಾಮರ್ಥ್ಯದ ಶೇಕಡ ೫ಕ್ಕೆ ವಿುರದಂತೆ ಒಂದು ಕಾಲೇಜಿನಿಂದ ಮತ್ತೊಂದಕ್ಕೆ ಕಾಲೇಜಿಗೆ ವರ್ಗಾವಣೆ ಮಾಡಬಾರದು.

೪ ಮುಂದಿನ ವರ್ಷದ ಕೋಟಾದಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ಹೆಚ್ಚಿನ ವರ್ಗಾವಣೆ ಮಾಡುವ ಪದ್ಧತಿಯನ್ನು ತಕ್ಷಣದಿಂದ ನಿಲ್ಲಿಸಬೇಕು.

೫ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಅದರಲ್ಲೂ ಸರ್ಕಾರೀ ವೈದ್ಯಕೀಯ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಾರತಮ್ಯವಿದೇ ವರ್ಗಾವಣೆ ಸಂಬಂಧಿಸಿದಂತೆ ಸ್ಥಾನಾಂತರ ವರ್ಗಾವಣೆ ಬಗ್ಗೆ ಅನಾಕ್ಷೇಪಣ ಪತ್ರ ನೀಡಬಾರದೆಂದು ಸೂಚಿಸಲಾಗಿದೆ, ನಿಗಧಿ ಪಡಿಸಿದ ಸ್ಥಾನ ಭರ್ತಿಯಾದ ನಂತರ ಯಾವ ಅನಾಕ್ಷೇಪಣ ಪತ್ರ ನೀಡಬಾರದು.

೬ ಮೇಲೆ ತಿಳಿಸಿದ ಪರತ್ತುಗೊಳಪಡಿಸಿ, ಈ ಕೆಳಕಂಡತೆ ಸ್ಥಾನಾಂತರ ವರ್ಗಾವಣೆಯನ್ನು ಅನುಮತಿಸಬಹುದು.

ಅ) ಒಂದು ಸರ್ಕಾರೀ ಕಾಲೇಜಿನಿಂದ ಮತ್ತೊಂದು ಸರ್ಕಾರಿ ಕಾಲೇಜಿಗೆ

ಆ) ಒಂದು ಮಾನ್ಯತೆ ಪಡೆದ ಕಾಲೇಜಿನ ಸರ್ಕಾರೀ ಸೀಟಿನಿಂದ ಇನ್ನೊಂದು ಮಾನ್ಯತೆ ಪಡೆದ ಕಾಲೇಜು ಅಥವಾ ಸರ್ಕಾರೀ ಕಾಲೇಜಿಗೆ

ಇ) ಮಾನ್ಯತೆ ಪಡೆದ ಕಾಲೇಜಿನ ಮ್ಯಾನೇಜ್‌ಮೆಂಟ್ ಸೀಟಿನಿಂದ ಮತ್ತೊಂದು ಮಾನ್ಯತೆ ಪಡೆದ ಕಾಲೇಜಿನಲ್ಲಿ ಮ್ಯಾನೇಜ್‌ಮೆಂಟ್ ಸೀಟಿಗೆ.

೭ ಈ ಕೆಳಕಂಡ ಸ್ಥಾನಾಂತರ ವರ್ಗಾವಣೆಯು ವಿಭಾಗಗಳಲ್ಲಿ ಯಾವ ಕಾರಣದಿಂದಲೂ ಸ್ಥಾನಾಂತರ ವರ್ಗಾವಣೆಯನ್ನು ಅನುಮತಿಸಬಾರದು.

ಅ) ಮ್ಯಾನೇಜ್‌ಮೆಂಟ್ ಸ್ಥಾನದಿಂದಾಗಲೀ ಅಥವಾ ಸರ್ಕಾರಿ ಸ್ಥಾನದಿಂದಾಗಲೀ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ಮಾನ್ಯತೆ ಪಡೆಯದ ಕಾಲೇಜಿನಿಂದ ಮಾನ್ಯತೆ ಪಡೆದ ಖಾಸಗೀ ಅಥವಾ ಸರ್ಕಾರೀ ಕಾಲೇಜಿಗೆ ವರ್ಗಾವಣೆ ಮಾಡಬಾರದು.

ಆ) ಮಾನ್ಯತೆ ಪಡೆದ ಖಾಸಗೀ ವೈದ್ಯಕೀಯ ಕಾಲೇಜಿನ ಮ್ಯಾನೇಜ್‌ಮೆಂಟ್ ಸೀಟಿನಿಂದ ಸರ್ಕಾರಿ ಕಾಲೇಜಿಗೆ ಸ್ಥಾನಾಂತರ ವರ್ಗಾವಣೆಯನ್ನು ಅನುಮತಿಸಕೂಡದು.

೮ ಎರಡು ಮಾನ್ಯತೆ ಪಡೆಯದ ಕಾಲೇಜುಗಳ ನಡುವೆ ಸ್ಥಾನಾಂತರ ವರ್ಗಾವಣೆಯನ್ನು ಸಂಬಂಧಪಟ್ಟ ವಿಶ್ವವಿದ್ಯಾಲಯಗಳ ಒಪ್ಪಿಗೆ ಪಡೆದು ಅನುಮತಿಸಬಹುದು. ಏಕೆಂದರೆ ಭಾರತೀಯ ವೈದ್ಯ ಪರಿಷತ್ತಿನ ಪಾತ್ರವೇನು ಇದರಲ್ಲಿ ಇರುವುದಿಲ್ಲ.

೯ ಸ್ನಾತಕೋತ್ತರ ಹಂತದಲ್ಲಿ ಸ್ಥಾನಾಂತರ ವರ್ಗಾವಣೆಯನ್ನು ಅನುಮತಿಸಕೂಡದು.

೧೦ ಮೇಲೆ ತಿಳಿಸಿರುವ ಮಾರ್ಗಸೂಚಿಗಳು ರಾಜ್ಯದಲ್ಲಿನ ದಂತ ಕಾಲೇಜುಗಳಿಗೂ ಅನ್ವಯಿಸುತ್ತದೆ.

ಸರ್ಕಾರವು ಮ್ಯಾನೇಜ್‌ಮೆಂಟ್ ಸೀಟಿನಿಂದ ಸರ್ಕಾರೀ ಸೀಟಿಗೆ ವರ್ಗಾವಣೆಯನ್ನು ಮಾಡಲು ಅನುಮತಿಯನ್ನು ಕೊಡುತ್ತಿಲ್ಲ. ಏಕೆಂದರೆ ಸರ್ಕಾರೀ ಸೀಟುಗಳು ಅರ್ಹತೆಯ ಮೇಲೆ ಇರುವ ಸ್ಥಾನಗಳಿರುತ್ತವೆ. ಆದರೆ ಖಾಸಗೀ ಸ್ಥಾನಗಳು ಇರುವುದಿಲ್ಲ. ಹಾಗೂ ಸರ್ಕಾರಿ ಸೀಟುಗಳಿಗೆ ಸರ್ಕಾರವು ಸಹಾಯಧನ ನೀಡುತ್ತಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ ಇದರಲ್ಲಿ ಐ.ಎಂ.ಸಿ.ಯವರು ಹಾಕ ತಕ್ಕಂಥ ಕಂಡೀಷನ್ಸ್ ಒಂದು ಕಡೆ ಇರಲಿ. ಈ ಮ್ಯಾನೇಜ್‌ಮೆಂಟ್ ಕೋಟದಲ್ಲಿ ಹೋಗತಕ್ಕಂಥ

ವಿದ್ಯಾರ್ಥಿಗಳಿಗೆ ಮತ್ತು ಮೆರಿಟ್‌ನಲ್ಲಿ ಹೋಗತಕ್ಕಂಥ ವಿದ್ಯಾರ್ಥಿಗಳಿಗೆ ಬೇರೆ ಬೇರೆ ರೂಲ್ಸ್‌ಗಳನ್ನು ಮಾಡಿದಂತಾಗುತ್ತದೆ. ಮೆರಿಟ್‌ನಲ್ಲಿ ಬಂದಂತಹ ವಿದ್ಯಾರ್ಥಿಗಳನ್ನು ಸರ್ಕಾರದವರೇ ಅನ್ ರೆಕಗ್ನೈಜ್ಡ್ ಕಾಲೇಜುಗಳಿಗೆ ಕಳುಹಿಸಿಕೊಡುತ್ತಾರೆ, ಈಗ ನವೆಂಬರ್‌ನಲ್ಲಾ ಗೊತ್ತಿದ್ದ ಹಾಗೆ ಮೀಕರ್ಸ್‌ಸೆಕ್ಷನ್ಸ್ ವಿದ್ಯಾರ್ಥಿಗಳನ್ನು ನೀವು ಅನ್-ರೆಕಗ್ನೈಜ್ ಕಾಲೇಜುಗಳಿಗೆ ಕಳುಹಿಸಿ ಕೊಡುತ್ತೀರಿ. ಅಂತಹ ವಿದ್ಯಾರ್ಥಿಗಳ ತಂದೆ-ತಾಯಿಗಳು ಬೇರೆ ಕಡೆ ವರ್ಗಾವಣೆಯಾದರೆ ಈ ಕಾಲೇಜಿನಿಂದ ಬೇರೆ ಕಾಲೇಜಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಮತ್ತು ಅನ್-ರೆಕಗ್ನೈಜ್ಡ್ ಕಾಲೇಜಿನಲ್ಲಿ ಅವನ ವಿದ್ಯಾಭ್ಯಾಸ ಮುಗಿದ ಮೇಲೆ ಆತ ಬಿ.ಜಿ. ಕೋರ್ಸ್‌ಗೆ ಹೋಗುವುದಕ್ಕೆ ಸಹ ಆಗುವುದಿಲ್ಲ. ಒಂದು ಕಡೆ ತಾವು ಮೆರಿಟ್ ಪೋಟದಲ್ಲಿ ಬಂದಂತಹವರನ್ನು ಡಿಸ್‌ಕ್ರಿಮಿನೇಶನ್ ಮಾಡಿದಂತಾಗುವುದಿಲ್ಲವೆ? ತಾವು ಹಂಚಿಕೆ ಮಾಡುವಾಗ ಸರಿ ಸಮಾನವಾಗಿ ಮಾಡಬೇಕು. ಈ ಬಗ್ಗೆ ಮಾನ್ಯ ಮಂತ್ರಿಗಳು ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಮಾಡತಕ್ಕಂಥ ಕಾಲದಲ್ಲಿ ಎಂಟ್ರೆನ್ಸ್ ಎಗ್ಸಾಮಿನೇಶನ್ ಮಾಡಿ ಪಾಸ್ ಆದರೆ ಆದರಲ್ಲಿ ಎಷ್ಟು ಸೀಟು ನಮಗೆ ಸರ್ಕಾರಿ ಕಾಲೇಜಿನಲ್ಲಿ ಸಿಗುತ್ತವೆ ಅದನ್ನು ನೋಡಿಕೊಂಡು ಸರ್ಕಾರಿ ಕಾಲೇಜಿನಲ್ಲಿ ಸಿಗದಿದ್ದರೆ ರೆಕಗ್ನೈಜ್ಡ್ ಕಾಲೇಜುಗಳಿಗೆ ಕೊಟ್ಟು ನಂತರ ಅನ್ ರೆಕಗ್ನೈಜ್ಡ್ ಕಾಲೇಜುಗಳಿಗೆ ಈ ಮೆರಿಟ್ ಸೀಟುಗಳನ್ನು ಹಂಚಿಕೆ ಮಾಡುತ್ತೇವೆ. ಆಗ ಇವರು ಹಿಂದುಳಿದ ವರ್ಗದವರು, ಪರಿಶಿಷ್ಟ ಜಾತಿಯವರು ಎಂದು ಗೊತ್ತಾಗುವುದಿಲ್ಲ. ಅವರು ಕೇಳಿರತಕ್ಕಂಥ ಎರಡು ಮೂರು ಕಾಲೇಜುಗಳಿಗೆ ನಾವು ಸೀಟು ಕೊಡಬೇಕಾಗುತ್ತದೆ. ನಾವು ಸೀಟು ಕೊಟ್ಟ ಮೇಲೆ ವರ್ಗಾವಣೆ ಮಾಡಬೇಕಾದಂತಹ ಸಂದರ್ಭದಲ್ಲಿ ಮೆರಿಟ್‌ನಲ್ಲಿ ಬಂದಿರತಕ್ಕಂಥ ವಿದ್ಯಾರ್ಥಿ ಸರ್ಕಾರಿ ಸೀಟು ಪಡೆದಿರುತ್ತಾನೆ. ಪ್ರೈವೇಟ್ ಕಾಲೇಜಿನಲ್ಲಿರತಕ್ಕಂಥ ವಿದ್ಯಾರ್ಥಿ ಕ್ಯಾಪಿಟೇಶನ್ ಕೊಟ್ಟು ಬಂದಿರುತ್ತಾರೆ. ಆಗ ನಾವು ಅವರಿಗೆ ವರ್ಗಾವಣೆ ಕೊಟ್ಟರೆ ಈ ಮೆರಿಟ್ ಮೇಲೆ ಬಂದಿರತಕ್ಕಂಥ ವಿದ್ಯಾರ್ಥಿಗೆ ಅನ್ಯಾಯ ಮಾಡಿದಂತಾಗುತ್ತದೆ. ಸೀಟುಗಳನ್ನು ಹಂಚಿಕೆ ಮಾಡುವಾಗ ಯಾವುದೇ ತಾರತಮ್ಯ ಮಾಡಬಾರದೆಂದು ವಿಶ್ವವಿದ್ಯಾನಿಲಯಗಳ ಜೊತೆ ನಾನು ಚರ್ಚೆ ಮಾಡುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಸ್ವಾಮಿ ವಾಸ್ತವಾಂಶ ಸಭೆಯ ಗಮನಕ್ಕೆ ಬಂದಿಲ್ಲ. ನನಗೆ ಅವಕಾಶ ಕೊಟ್ಟರೆ ನಾನು ಹೇಳುತ್ತೇನೆ.

ಉಪಾಧ್ಯಕ್ಷರು.—ಇಲ್ಲ ನೀವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಸ್ವಾಮಿ ಮಾನ್ಯ ಸದಸ್ಯರು ವಾಸ್ತವಾಂಶ ಏನಿದೆ ಎಂದು ಹೇಳುವವರಿದ್ದಾರೆ. ಅವರಿಗೆ ಅವಕಾಶ ಕೊಡಿ. ಅವರು ಸಹ ಮಾಜಿ ಮಂತ್ರಿಗಳಾಗಿದ್ದವರು.

ಶ್ರೀ ಎಂ. ರಾಮಪ್ಪ.—ಕೊಡಿ ಸ್ವಾಮಿ. ಅದು ಈ ಸಭೆಗೆ ಗೊತ್ತಾಗಲಿ.

೧೨-೮೦ ಸಂಧ್ಯಾಹ್ನ

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ನಾನು ಕೆಲವು ವಾಸ್ತವಾಂಶಗಳನ್ನು ಹೇಳಬೇಕಾಗಿದೆ.

ಉಪಾಧ್ಯಕ್ಷರು.—ನೀವು ಇದಕ್ಕೆ ಸಹಿ ಮಾಡಿಲ್ಲವಾದ್ದರಿಂದ ನೀವು ಕೇಳುವುದಕ್ಕೆ ಬರುವುದಿಲ್ಲ. ತಾವು ದಯವಿಟ್ಟು ಕುಳಿತುಕೊಳ್ಳಿ. ನೀವು ಮಾತನಾಡಬೇಕು ಎಂದರೆ ಪ್ರತ್ಯೇಕವಾದ ಸೂಚನೆ ಕಳುಹಿಸಿ ಮಾತನಾಡಬಹುದು. ಅಥವಾ ಬೇರೆ ರೀತಿಯಿಂದ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೋರಬಹುದು.

ಶ್ರೀ ಡಿ. ಎ. ಚಿನ್ನಪ್ಪ.—ಅವರು ವಾಸ್ತವಾಂಶಗಳನ್ನು ಹೇಳುತ್ತೇನೆಂದು ಹೇಳುತ್ತಿದ್ದಾರೆ. ಅವರಿಗೆ ಮಾತನಾಡಲು ಅವಕಾಶ ಕೊಡಿ.

ಉಪಾಧ್ಯಕ್ಷರು —ತಾವು ಕುಳಿತುಕೊಳ್ಳಿ.

Sri A. Lakshmi Sagar.—Sri Kharge holds a responsible position. Rules must be equally imposed to all members. Few minutes back the request of Sri Vedantha Hemmige was turned down on your plea. Now you cannot insist upon the hon. Speaker to violate these rules

when it comes to Sri Thimmegowda. Rules are applicable to you as well as to us.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರಿಗೆ ಮಾತನಾಡುವುದಕ್ಕೆ ಅವಕಾಶ ಕೊಡಿ.

ಉಪಾಧ್ಯಕ್ಷರು.—ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅವರು ವಾಸ್ತವಾಂಶಗಳನ್ನು ಹೇಳುತ್ತೇವೆಂದು ಹೇಳಿದ್ದಾರೆ. ಅವರೂ ಹೇಳಲಿ, ವಾಸ್ತವಾಂಶ ಏನಿದೆ ಎಂದು ಗೊತ್ತಾಗಲಿ.

ಶ್ರೀ ಎ. ಲಕ್ಷ್ಮೀಸಾಗರ್.—ಪೇದಾಂತ ಹೆಮ್ಮಿಗೆಯವರು ಏನು ಹೇಳುತ್ತೇನೆಂದು ಹೇಳಿದರೋ ಅದನ್ನೇ ಅವರು ಹೇಳುವುದು. It does not arise, he is not a signatory.

ಉಪಾಧ್ಯಕ್ಷರು.—ಶ್ರೀ ಎನ್. ಎಸ್. ಬೋಡ್‌ರವರು ಮಾತನಾಡಿ.

ಶ್ರೀ ಎನ್.ಎಸ್. ಬೋಡ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಒಂದು ಗೌರ್ನಮೆಂಟ್ ಕಾಲೇಜಿನಿಂದ ಖಾಸಗಿ ಮೆಡಿಕಲ್ ಕಾಲೇಜಿಗೆ ಮೆರಿಟ್ ಇಲ್ಲದೇ ಇರುವ ವಿದ್ಯಾರ್ಥಿಯನ್ನು ವರ್ಗಾವಣೆ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ವಿದ್ಯಾರ್ಥಿಗಳು ಒಂದು ಸಾರಿ ಯಾವುದೇ ಮೆಡಿಕಲ್ ಕಾಲೇಜಿಗೆ ಸೇರಿದರೆ ಅವರಿಗೆ ಯಾವುದೇ ಕಾಲೇಜಿಗೆ ಟ್ರಾನ್ಸ್‌ಫರ್ ಮಾಡಿಕೊಳ್ಳುವ ಹಾಗೆ ರೂಲ್ಸ್‌ನ್ನು ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲೇ ಒಂದು ಕಮಿಟಿಯನ್ನು ಮಾಡಲಾಗಿತ್ತು. ಮಾನ್ಯ ಮುಖ್ಯಮಂತ್ರಿಯವರು ಎಲ್ಲಾ ವಿಷಯಗಳನ್ನೂ ಪರಿಗಣಿಸಿ ರೂಲ್ಸ್‌ಗಳನ್ನು ಮಾಡಿ ಸಂಬಂಧಪಟ್ಟ ಡೈರೆಕ್ಟರ್ ಆಫ್ ಮೆಡಿಕಲ್ ಸೈನ್ಸ್ ಅವರಿಗೆ ಕೊಟ್ಟಿದ್ದಾರೆ. ವರ್ಗಾವಣೆ ಮಾಡತಕ್ಕ ಸಂದರ್ಭದಲ್ಲಿ ಕೆಲವು ನಿಯಮಗಳನ್ನು ಈ ಕಾನೂನಿನಲ್ಲಿ ಮಾಡಲಾಗಿದೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಯಾವುದೇ ವಿದ್ಯಾರ್ಥಿಯನ್ನು ಯಾವುದೇ ಕಾಲೇಜಿಗೆ ವರ್ಗಾವಣೆ ಮಾಡಿದರೆ, ಮೆರಿಟ್ ಆಧಾರದ ಮೇಲೆ ಸೆಲೆಕ್ಟ್ ಆಗಿರುವವರಿಗೆ ಅನ್ಯಾಯ ಮಾಡಿದ ಹಾಗಾಗುತ್ತದೆ. ಮೆರಿಟ್ ವಿದ್ಯಾರ್ಥಿಗಳಿಗೆ ಮಾತ್ರ ನಾವು ವರ್ಗಾವಣೆ ಮಾಡಿದ್ದೇವೆಯೇ ಹೊರತು ಬೇರೆಯವರಿಗೆವರ್ಗಾವಣೆ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಒಂದು ಕಡೆ ರೂಲ್ಸ್ ಪ್ರಕಾರ ಮೆರಿಟ್ ಇಲ್ಲದೇ ಇರುವ ವಿದ್ಯಾರ್ಥಿಗಳನ್ನು ವರ್ಗಾವಣೆ ಮಾಡುವುದಕ್ಕೆ ಬರುವುದಿಲ್ಲವೆಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಪ್ರೈವೇಟ್ ಮ್ಯಾನೇಜ್‌ಮೆಂಟಿನ ಮೆಡಿಕಲ್‌ಕಾಲೇಜಿನಲ್ಲಿ ಮೆರಿಟ್ ಇಲ್ಲದೇ ಸೇರಿಕೊಂಡಿರುವ ವಿದ್ಯಾರ್ಥಿಗಳನ್ನು ಗೌರ್ನಮೆಂಟ್ ಮೆಡಿಕಲ್ ಕಾಲೇಜುಗಳಿಗೆ ವರ್ಗಾವಣೆ ಮಾಡಿರುವುದು ಇದೆ ಎಂದು ಕೂಡು ಬಂದಿದೆ. ನಿಮ್ಮ ರೂಲ್ಸ್ ನಮಗೆ ಹೇಳುವುದಕ್ಕೆ ಮಾತ್ರವೇ ಇರುವುದು? ನಿಮ್ಮ ರೂಲ್ಸ್ ವಿರುದ್ಧವಾಗಿ ವರ್ಗಾವಣೆ ಮಾಡಿದರೆ ಗೌರ್ನಮೆಂಟ್ ಆರ್ಡರ್‌ಗೆ ಏನು ಬೆಲೆ ಇದೆ?

ಉಪಾಧ್ಯಕ್ಷರು.—ಸಚಿವರು ಉತ್ತರ ಕೊಡುತ್ತಾರೆ ಕುಳಿತುಕೊಳ್ಳಿ.

ಶ್ರೀ ಎನ್. ಎಸ್. ಬೋಡ್.—ಮಾನ್ಯ ಮಂತ್ರಿಯವರು ಇನ್ನೂ ಒಂದು ವಿಷಯವನ್ನು ಹೇಳಿದರು. ಇಲ್ಲಿ ಐ.ಎಂ.ಸಿ. ರೂಲ್ಸ್‌ನ್ನು ಅನ್ವಯ ಮಾಡಲಿಕ್ಕೆ ಬರುವುದಿಲ್ಲ ಎಂದು ಹೇಳಿದರು. ದೇಶದಲ್ಲಿರತಕ್ಕಂಥ ಮೆಡಿಕಲ್ ಸೈನ್ಸ್ ಬೋರ್ಡ್ ಏನು ಇದೆ ಅದನ್ನು ಮಾಡಿದ್ದು ಏತಕ್ಕಾಗಿ ? ಅದು ಈ ರಾಜ್ಯಕ್ಕೆ ಅಪ್ಲೈ ಆಗುತ್ತದೆಯೋ ಇಲ್ಲವೋ ಎಂದು ದಯವಿಟ್ಟು ತಿಳಿಸಬೇಕು. ಹಾಗೆಯೇ ನನ್ನ ಹತ್ತಿರ ಒಂದು ಲೆಟರ್ ಸಿಕ್ಕಿದೆ. ಅದರ ಪ್ರಕಾರ ರೂಲ್ಸ್ ಪ್ರೇವಸ್ ಆದವೇಲೆಯೂ ಕೂಡ ಈ ವಿಚಾರದಲ್ಲಿ ತಾರತಮ್ಯ ನಡೆದುದು ಕಂಡು ಬರುತ್ತದೆ. ಆದುದರಿಂದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಸೂಕ್ತ ಬದಲಾವಣೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ರಾಜ್ಯದಲ್ಲಿ ಮೆಡಿಕಲ್ ಕೌನ್ಸಿಲ್‌ನವರು ಏನು ರೂಲ್ಸ್‌ಗಳನ್ನು ಹಾಕಿದ್ದಾರೆ. ವರ್ಗಾವಣೆ ವಿಚಾರದಲ್ಲಿ ಅದನ್ನು ಅನುಸರಿಸಿಲ್ಲ ಎಂದು ಹೇಳಿದ್ದಾರೆ. ನನಗನಿಸಿದಂತೆ ಬೇರೆ ರಾಜ್ಯಗಳಲ್ಲಿ ಇಷ್ಟೊಂದು ಖಾಸಗೀ ವೈದ್ಯಕೀಯ ಕಾಲೇಜುಗಳು ಇಲ್ಲ. ನಮ್ಮ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ವೈಸ್‌ಚಾನ್ಸಲರ್‌ರವರನ್ನು ಸೇರಿಸಿಕೊಂಡು ಈ ರೀತಿಯಾದ ಒಂದು ತೀರ್ಮಾನಕ್ಕೆ ಬಂದಿದ್ದೇವೆ. ಆ ಪ್ರಕಾರವೇ ಈಗ ನಡೆಯುತ್ತಾ ಇದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನಖರ್ಗೆ.—ಈ ರೀತಿಯ ರೂಲ್ಸ್ ರೆಗ್ಯುಲೇಶನ್ಸ್ ಇಷ್ಯೂ ಮಾಡಿದ ನಂತರ, ಇನ್ನೊಂದನ್ನು ಮಾಡಿಫೈ ಮಾಡಿ, ಮ್ಯಾನೇಜ್‌ಮೆಂಟ್ ಕೋಟಾದಲ್ಲಿ ಕೊಟ್ಟಿದ್ದಾರೆ ಎಂದು ಅವರು ಹೇಳುತ್ತಿದ್ದಾರೆ ಈ ರೂಲ್ಸ್ ಇರುವಾಗ ಈ ರೀತಿಯಲ್ಲಿ ಅದನ್ನು ವೈಲೇಟ್ ಮಾಡುವ ಅವಶ್ಯಕತೆ ಏನು ಬಂತು ?

ಶ್ರೀ ಬಿ. ರಾಚಯ್ಯ.—ಅದರ ವಿವರಗಳನ್ನು ನಾನು ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ರೂಲ್ಸ್‌ನ್ನು ವಯಲೇಟ್ ಮಾಡಿದ್ದರೂ, ಈ ರೂಲ್ಸ್‌ನ್ನು ಕೋಟ್ ಮಾಡಬಾರದಾಗಿತ್ತು.

ಶ್ರೀ ಬಿ. ರಾಚಯ್ಯ.—ಹಾಗೆ ಮಾಡಿರುವುದು ಮ್ಯಾನೇಜ್‌ಮೆಂಟ್ ಸೀಟ್‌ನಲ್ಲಿಯೋ, ಗವರ್ನ್‌ಮೆಂಟ್ ಸೀಟ್‌ನಲ್ಲಿಯೋ ಎಂದು ನೋಡಿ ಹೇಳಬೇಕಾಗುತ್ತದೆ. ಅದನ್ನು ನೋಡಿ ಹೇಳುತ್ತೇನೆ.

ಉಪಾಧ್ಯಕ್ಷರು....ಮಾನ್ಯ ವೀರಪ್ಪ ಮೊಯಿಲಿಯವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಬೇಕು.

ಶ್ರೀ ಎನ್. ಎಸ್. ಖೇಡ್.—ಅಧ್ಯಕ್ಷರೇ. ನನಗೆ ಸರಿಯಾದ ಉತ್ತರ ಸಿಕ್ಕಲ್ಲಿಲ್ಲ.

ಉಪಾಧ್ಯಕ್ಷರು.—ತಾವು ಸಚಿವರಿಗೆ ವಿಷಯವನ್ನು ಕುಳುಹಿಸಿಕೊಡಿ. ತಾವು ಹೇಳುವ ವಿಚಾರ ಅವರ ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತದೆ. ಗೊತ್ತಿಲ್ಲದ ವಿಚಾರದಲ್ಲಿ ಹೇಗೆ ಉತ್ತರವನ್ನು ಕೊಡುತ್ತಾರೆ ?

ಶ್ರೀ ಎನ್. ಎಸ್. ಖೇಡ್.—ನಾನು ಅವರಿಗೆ ಪತ್ರ ಬರೆದಿದ್ದೇನೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಕೇಳಿರತಕ್ಕಂಥಾದ್ದು ಏನೆಂದರೆ, ಖಾಸಗಿ ಕಾಲೇಜಿನಲ್ಲಿ ರತಕ್ಕಂಥ ಖಾಸಗಿ ಸೀಟಿನ ವಿದ್ಯಾರ್ಥಿಗಳು ಯಾರಿದ್ದಾರೆ, ಅವರಿಗೂ ಕೂಡ ಇಂತಹ ಬೇಡಿಕೆ ಬಂದರೆ, ಅವಕಾಶವನ್ನು ಮಾಡಿಕೊಡಿ ಎಂಬುದಾಗಿದೆ. ಆ ಬಗ್ಗೆ ಸಂಬಂಧಪಟ್ಟವರೊಂದಿಗೆ ಈ ಕುರಿತು ವಿಂಟಿಂಗ್ ಮಾಡಿದ್ದಾಗ, ಹೀಗೆ ಏಕೆ ಮಾಡಬಾರದು ಎಂದು ಕೇಳಿದಾಗ ಇಲ್ಲಿ ಬಹಳ ಹೆಚ್ಚು ಸಂಖ್ಯೆಯಲ್ಲಿ ಖಾಸಗಿ ಕಾಲೇಜುಗಳು ಇವೆ, ಈ ರೀತಿಯಾಗಿ ಪರ್ಗಾವಣೆ ಮಾಡಿದರೆ ಕಷ್ಟವಾಗುತ್ತದೆ, ಮತ್ತು ಅದರಿಂದ ಉಂಟಾಗುವ ಇತರ ಸಮಸ್ಯೆಗಳ ಕುರಿತಂ ಅವರು ತಿಳುವಳಿಕೆ ಕೊಟ್ಟಿದಂದರಿಂದ ಮುಖ್ಯ ಮಂತ್ರಿಗಳ ಮಟ್ಟದಲ್ಲಿ ಈ ಒಂದು ತೀರ್ಮಾನ ಆಗಿರುತ್ತದೆ.

ಉಪಾಧ್ಯಕ್ಷರು.—ಮಾನ್ಯ ವೀರಪ ಮೊಯಿಲಿಯವರು ತಮ್ಮ ಗಮನಸೆಳೆಯುವ ಸೂಚನೆಯನ್ನು ಮಂಡಿಸುವುದು.

ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳನ್ನು ವಜಾ ಮಾಡಿ ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದು

ಶ್ರೀ ಎಂ. ವೀರಪ್ಪಮೊಯಿಲಿ.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರಕಾರಿ ನೌಕರರ ಸಂಘದ ಪದಾಧಿಕಾರಿಗಳನ್ನು ವಜಾ ಮಾಡಿ, ಆಡಳಿತಾಧಿಕಾರಿಯನ್ನು ನೇಮಕ ಮಾಡಿರುವುದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಂಖ್ಯ ಮುಂತ್ರಿಗಳ ಪರವಾಗಿ ನಾನು ಈ ಹೇಳಿಕೆಯನ್ನು ಓದುತ್ತೇನೆ ಇದು ನನ್ನ ಇಲಾಖೆಗೆ ಸಂಬಂಧಪಟ್ಟದ್ದು ಆಗಿದೆ. ಇದು ಇಂಗ್ಲೀಷ್‌ನಲ್ಲಿ ಇರುವುದರಿಂದ ಕ್ಷಮೆ ಕೋರಿ ಅದನ್ನು ಓದುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಇದರ ಪ್ರತಿ ಕನ್ನಡದಲ್ಲಿ ಇಲ್ಲವೆ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕನ್ನಡದಲ್ಲಿ ಇಲ್ಲ, ಅದಕ್ಕಾಗಿ ಕ್ಷಮೆ ಕೇಳಿಕೊಂಡಿದ್ದೇನೆ.

MR. SPEAKER.—The District Registrar Bangalore District brought to Government notice that the Karnataka State Government Employees Association has failed to submit the annual return as